ಸಿ.ಸಿ .ನಂ.126/2023 ಪಿಡಬ್ಲೂಃ 1

ದಿನಾಂಕಃ 03-09-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

17. ನಾನು ದಿಃ 20-09-2023 ಸಹಕಾರಿ ಸಂಘಗಳ ಸಹಾಯಕ ನಿಬಂಧಕರು, ಕುಮಟಾ ಮಾಡಿರುವ ಆದೇಶವನ್ನು ನೋಡಿರುತ್ತೇನೆ. ಸಾಕ್ಷಿ ಸದರಿ ಆದೇಶದ ದೃಢಿಕೃತ ನಕಲನ್ನು ನೋಡಿ ಗುರುತಿಸಿರುತ್ತಾರೆ . ಸದರಿ ಆದೇಶದಲ್ಲಿ ಮಾರಾಟ ಅಧಿಕಾರಿ ಸಹಕಾರ ಸಂಘಗಳು ಹೊನ್ನಾವರ ಇವರಿಗೆ ಸಂಸ್ಥೆಯಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ತನಿಖೆ ನಡೆಸುವಂತೆ ತಿಳಿಸಿದ್ದರು ಎಂದರೆ ಸರಿ . ಮಾರಾಟ ಅಧಿಕಾರಿಗಳು ಸಹಕಾರಿ ಸಂಘ ಹೊನ್ನಾವರ ಇವರ ವರದಿ ಇನ್ನೂ ಬಂದಿಲ್ಲ , ತನಿಖೆ ಇನ್ನೂ ನಡೆಯುತ್ತದೆ . ಸದರಿ ದಾಖಲಾತಿಯಲ್ಲಿ ದಿಃ 20-09-2023 ರಂದು ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿಸಲಾಗಿದೆ ಎಂದು ಬರೆದಿದ್ದಾರೆ ಎಂದರೆ ಸರಿ . ಆ ಸಮಯದಲ್ಲಿ ಶ್ರೀಮತಿ ಸರಿತಾರವರು ಮಾರಾಟ ಅಧಿಕಾರಿಗಳಾಗಿದ್ದರು. ಸದರಿ ಆದೇಶದಲ್ಲಿ ಶ್ರೀಮತಿ ಸರಿತಾರವರು ಹಾಜರು ಪಡಿಸಿದ ವರದಿಯಲ್ಲಿ ಅವ್ಯವಹಾರ ಕುರಿತು ನಿಖರವಾದ ಜವಾಬ್ದಾರಿಯನ್ನು ನಿಗದಿಪಡಿಸಿಲ್ಲ ಕಾರಣ ಪುನಃ ಮತ್ತೇ ವಿಚಾರಣೆಯನ್ನು ಮಾಡಬೇಕು ಎಂದು ಆದೇಶದಲ್ಲಿ ಬರೆದಿದ್ದಾರೆ ಎಂದರೆ ಸರಿ . ಈ ಆದೇಶದಲ್ಲಿ ಈ ಕೇಸಿನ ಆರೋಪಿಯನ್ನು ಹೊರತು ಪಡಿಸಿ ಉಳಿದ ಮೂರು ಕೇಸುಗಳಲ್ಲಿ ಸಾಲಗಾರರ ಖಾತೆಯಿಂದ ಸಾಲದ ಹಣ ಜಾಮೀನುದಾರರಾದ ಈ ಪ್ರಕರಣದ ಆರೋಪಿಯ ಖಾತೆಗೆ ಸಂದಾಯ ಆಗಿದೆಯೋ ಹೇಗೆ ತನಿಖೆ ಮಾಡಬೇಕೆಂದು ಆದೇಶಿಸಿದ್ದಾರೆ ಎಂದರೆ ಸರಿ . ಆರೋಪಿ ಒಂದು ಕೋಟಿಗಿಂತ ಹೆಚ್ಚಿನ ಹಣಕ್ಕೆ ಅವ್ಯವಹಾರ ಮಾಡಿದ್ದಾರೆ. ಆರೋಪಿ ಇಲ್ಲಿಯವರೆಗೆ ಫಿರ್ಯಾದು ಸಂಸ್ಥೆಗೆ ಎಷ್ಟು ಅವ್ಯವಹಾರ ಮಾಡಿದ್ದಾರೆ ಎಂಬುದು ಇನ್ನೂ ತನಿಖೆ ಪೂರ್ತಿ ಆಗಿಲ್ಲ ಎಂದರೆ ಸರಿ . ತನಿಖೆ ಪ್ರಾರಂಭವಾಗಿ ಒಂದು ವರ್ಷ ಆಗುತ್ತಾ ಬಂತು ಎಂದರೆ ಸರಿ . ತನಿಖೆಗೆ ಸಂಬಂಧಪಟ್ಟಂತೆ ಬ್ಯಾಂಕಿಗೆ ಬಂದು ದಾಖಲಾತಿಗಳನ್ನು ಪಡೆದುಕೊಂಡು

ಹೋಗಿದ್ದಾರೆ . ಪ್ರಭಾರಿ ಕಾರ್ಯನಿರ್ವಾಹಕರಾದ ನಾಗರಾಜರವರು ದಾಖಲಾತಿಗಳನ್ನು ನೀಡಿದ್ದಾರೆ . ಆರೋಪಿಗೆ ಸಂಬಂಧಪಟ್ಟಂತೆ ಯಾವ ಯಾವ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿದ್ದಾರೆ ಗೊತ್ತಿಲ್ಲ . ಆರೋಪಿ ಅವ್ಯವಹಾರದ ಬಗ್ಗೆ ತನಿಖಾಧಿಕಾರಿಗಳು ನನ್ನ ವಿಚಾರಣೆ ಮಾಡಿಲ್ಲ . ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಸ್ವಲ್ಪ ಹಣ ಕಟ್ಟಿದ್ದಾರೆ ಇನ್ನೂ ಸ್ವಲ್ಪ ಹಣ ಬರುವುದು ಬಾಕಿ ಇದೆ . ಅಂದಾಜು ಎಷ್ಟು ಹಣ ಕಟ್ಟಿದ್ದಾರೆ ದಾಖಲಾತಿ ನೋಡಿ ಹೇಳಬೇಕು . ಅಂದಾಜು 80 ಲಕ್ಷದವರೆಗೆ ಕಟ್ಟಿರಬಹುದು. ಹಣವನ್ನು ಕಟ್ಟಿ ಎಂದು ನಾವಾಗಲೀ , ಆಡಳಿತ ಮಂಡಳಿಯವರಾಗಲೀ ನೋಟಿಸು ಕೊಟ್ಟಿದ್ದು ನೆನಪಿಲ್ಲ , ಆದರೆ ಆಡಳಿತ ಮಂಡಳಿಯವರು ಮೌಖಿಕವಾಗಿ ಹೇಳಿದ್ದಾರೆ . ಆ ಸಮಯದಲ್ಲಿ ಆಡಳಿತ ಮಂಡಳಿಯಲ್ಲಿ ಗೋವಿಂದ ವಿ ಪಟಗಾರ , ಅಧ್ಯಕ್ಷರು ಹಾಗೂ ಸಾವಿತ್ರಿ ಬಾಯಿಯವರು ಉಪಾಧ್ಯಕ್ಷರಾಗಿದ್ದರು . 2020 ರಲ್ಲಿ ಮೌಖಿಕವಾಗಿ ಹಣವನ್ನು ಕಟ್ಟುವಂತೆ ಹೇಳಿದ್ದರು . ಈ ರೀತಿ ಈ ಹಣವನ್ನು ಕಟ್ಟಿ ಎಂದು ಹೇಳಿದ ಬಗ್ಗೆ ಠರಾವು ಪಾಸು ಆದ ಬಗ್ಗೆ ದಾಖಲಾತಿ ನೋಡಿ ಹೇಳಬೇಕು . ಆ ಬಗ್ಗೆ ಠರಾವು ಆಗಿರಬಹುದು. ಯಾವುದಾದರೂ ವರದಿ ಅಂತಿಮತೆಯನ್ನು ಪಡೆದುಕೊಂಡಿತ್ತೊ ಇಲ್ಲವೋ ನನಗೆ ಗೊತ್ತಿಲ್ಲ. ಠರಾವು ಪಾಸಾದ ಬಗ್ಗೆ ಹೇಳಲು ಸೂಕ್ತ ವ್ಯಕ್ತಿ ಪ್ರಭಾರಿ ಕಾರ್ಯನಿರ್ವಹಕರು ನಾಗರಾಜರವಾಗಿರುತ್ತಾರೆ .

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.